	ಪ್ರಾರಂಭಿಸಲು ಇರುವ ಅಡಚಣೆಗಳೇನು ? ಯಾವಾಗ ಪ್ರಾರಂಭಿಸಲಾಗುವುದು?	ಕಟ್ಟಡಗಳಲ್ಲಿರುವ ಕೊಠಡಿಗಳ ಲಭ್ಯತೆ ಹಾಗೂ ಸ್ಥಳಾವಕಾಶಗಳನ್ನು ಅನುಸರಿಸಿ ಹಂತ ಹಂತವಾಗಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೬೮೧ (೧೯೧೬)

ಸದಸ್ಯರ ಹೆಸರು : ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ)

ಉತ್ತರಿಸುವ ಸಚಿವರು : ಶ್ರೀ ಆರ್.ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದೊಡ್ಡಬಳ್ಳಾಪುರ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು ೫೦ ರಿಂದ ೧೦೦ ಹಾಸಿಗೆಗೆ ಮೇಲ್ದರ್ಜೆಗೇರಿಸಿರುವುದು ನಿಜವಲ್ಲವೇ?	ಹೌದು.
ಆ)	ಈವರೆವಿಗೆ ಈ ಆಸ್ಪತ್ರೆ ಪೂರಕವಾದ ಕಾಮಗಾರಿಯನ್ನು ಕೈಗೆತ್ತಿಕೊಂಡಿಲ್ಲದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?	ಬಂದಿದೆ
ಇ)	ಹಾಗಿದ್ದಲ್ಲಿ, ನೂತನ ಸಾರ್ವಜನಿಕ ಆಸ್ಪತ್ರೆಯನ್ನು ಬೇರೆ ಸ್ಥಳದಲ್ಲಿ ನಿರ್ಮಿಸಲು	ನೂತನ ಸಾರ್ವಜನಿಕ ಆಸ್ಪತ್ರೆಯನ್ನು ಬೇರೆ ಸ್ಥಳದಲ್ಲಿ ನಿರ್ಮಿಸಲು ಇಲಾಖೆ ಸ್ಥಳ

	ಇಲಾಖೆ ಸ್ಥಳ ಪಡೆದಿದೆಯೇ? ಇದಕ್ಕಾಗಿ ನಡೆದಿರುವ ವ್ಯವಹಾರಗಳ ಬಗ್ಗೆ ಸಮಗ್ರ ವರದಿಯನ್ನು ನೀಡಲಾಗುವುದೇ?	ಪಡೆದಿರುವುದಿಲ್ಲ. ಸದರೀ ಆಸ್ಪತ್ರೆಯ ೧ ಎಕರೆ ೩೦ ಗಂಟೆ ವಿಸ್ತೀರ್ಣದಲ್ಲಿ ಕಾರ್ಯನಿರ್ವಹಿಸುತ್ತದ್ದು, ಈ ವಿಸ್ತೀರ್ಣದಲ್ಲಿ ೧೧ ಆಸ್ತತ್ರೆ ಸಿಬ್ಬಂದಿಗಳ ವಸತಿಗೃಹಗಳು ಸಹ ಇರುತ್ತವೆ. ಈ ಬಗ್ಗೆ ಹೊಸ ನಿವೇಶನ ಪಡೆಯಲು ವ್ಯವಹಿರಿಸಲಾಗುತ್ತಿದೆ. ಪಡೆದ ನಂತರ ಕಟ್ಟಡ ಕಟ್ಟುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೬೮೨ (೧೯೧೭)

ಸದಸ್ಯರ ಹೆಸರು : ಶ್ರೀ ನರಸಿಂಹಸ್ವಾಮಿ. ಜೆ.
(ದೊಡ್ಡಬಳ್ಳಾಪುರ)

ಉತ್ತರಿಸುವ ಸಚಿವರು : ಶ್ರೀ ಬಾಲಚಂದ್ರ ಲ. ಜಾರಕಿಹೊಳಿ
(ಸಮಾಜ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಫಲಾನುಭಿವಗಳ ಆಯ್ಕೆ ಪೂರ್ಣಗೊಂಡಿದ್ದು, ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೇವಲ ಮೂರು ಕಂಬಳ	ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ವಿದ್ಯುತ್ ಲೈನ್ ವೆಚ್ಚವನ್ನು (ಕಂಬಗಳಿಗೆ) ಫಲಾನುಭವಿಗಳೇ ಭರಿಸುವಂತೆ ನಿಗಮ ಸೂಚಿಸಿರುವುದಿಲ್ಲ.